**ಓ.ಎಸ್ ನಂ. 135/2016 ಡಿ.ಡಬ್ಲ್ಯೂ-1 (ಅಮೀರ್ ಜಾನ್ )**

**ಸಾಕ್ಷಿಯನ್ನು ದಿನಾಂಕಃ 04.03.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ ಬಿ ಎಸ್ ಎಸ್ ವಕೀಲರಿಂದಃ**

1. ವಾದ ಪತ್ರದ ಶಿರೋನಾಮೆಯಲ್ಲಿ ತೋರಿಸಿರುವಂತೆ 12 ನೇ ಪ್ರತಿವಾದಿ ಅಮೀರ್ ಬಿನ್ ಲೇಟ್ ದಸ್ತಗಿರ್ ಸಾಬ್ ಎನ್ನುವ ವ್ಯಕ್ತಿ ನಾನು ಅಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ತಹಶೀಲ್ದಾರ್ ರವರಿಗೆ ನೀಡಿದ ಕುಟುಂಬ ಜೀವಿನ ಸದಸ್ಯರ ಪತ್ರವನ್ನು ನೀಡುವ ಬಗ್ಗೆ ಸಲ್ಲಿಸಿರುವ ಅರ್ಜಿಯಲ್ಲಿ ತೋರಿಸಿರುವ 8 ನೇ ವ್ಯಕ್ತಿ ಅಮೀರ್ ರವರು ಈ ದಾವೆಯ 12 ನೇ ಪ್ರತಿವಾದಿಯಾಗಿರುತ್ತಾರೆ ಎಂದರೆ ಸರಿಯಲ್ಲ. ನಾನು ದಸ್ತಗಿರ್ ಸಾಬ್ ರವರ ಮಗ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಲಿಖಿತ ಹೇಳಿಕೆಯನ್ನು ತಯಾರಿಸಲು ನಾನೇ ಮಾಹಿತಿಯನ್ನು ನೀಡಿರುತ್ತೇನೆ. ನಾನು ದಸ್ತಗಿರ್ ಸಾಬ್ ರವರ ಮಗ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ನಾನು ದಸ್ತಗಿರ್ ಸಾಬ್ ರವರ ಮಗ ಎಂದು ತೋರಿಸಲು ವಂಶವೃಕ್ಷವನ್ನು ಹಾಜರುಪಡಿಸಿರುತ್ತೇನೆ. ನಾನು ನ್ಯಾಯಾಲಯಕ್ಕೆ ವಂಶವೃಕ್ಷವನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮೃತ ಪ್ರತಿವಾದಿ 17, ಪ್ರತಿವಾದಿ 19 ಮತ್ತು 20 ರವರ ಮಾತು ಕೇಳಿ ನಾನೇ ಅಮೀರ್ ಎಂದು ಹೇಳಿ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

2. ವಾದಿ ರವರು ಪ್ರತಿವಾದಿ ರವರ ಯಾವ ಪರಿಹಾರ ಕೋರಿ ದಾವೆ ಸಲ್ಲಲಿಸಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ ಸಾಕ್ಷಿಯು ಮುಂದುವರಿದು ಜಮೀನು ನಮ್ಮದು ಎಂದು ಹೇಳಿ ದಾವೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ದಾವಾಸ್ತಿಗಳು 1 ನೇ ವಾದಿ ರವರ ಗಂಡ 2 ರಿಂದ 4 ನೇ ವಾದಿ ರವರ ತಂದೆ ಹೆಚ್

ಎನ್ ನಾಗರಾಜು ರವರು ಪ್ರತಿವಾದಿ 1 ರಿಂದ 4 ರವರಿಂದ ಖರೀದಿಸಿದಂತಹ ಸ್ವತ್ತುಗಳು ಎಂದು ತಿಳಿಸಿರುತ್ತಾರೆ ಎಂದರೆ ಸಾಕ್ಷಿಯು ಸರಿಯಲ್ಲ ಎಂದು ನುಡಿಯುತ್ತಾರೆ.

3. 2 ನೇ ಪ್ರತಿವಾದಿ ಅಬ್ದುಲ್ಲಾ ರವರು ಈಗ ತೀರಿಕೊಂಡಿರುತ್ತಾರೆ. ನನ್ನ ಲಿಖಿತ ಹೇಳಿಕೆಯನ್ನು ಸಲ್ಲಿಸುವ ಸಮಯದಲ್ಲಿ ಸದರಿ ಅಬ್ದುಲ್ಲಾ ರವರು ದೆಹಲಿಯಲ್ಲಿ ವಾಸವಾಗಿದ್ದರು. 2016 ರಲ್ಲಿ ನ್ಯಾಯಾಲಯದಿಂದ ಸಮನ್ಸ್ ಬಂದಿರುತ್ತದೆ ಆದರೆ ಅದನ್ನು ನಾವು ಪಡೆದುಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ನ್ಯಾಯಾಲಯದಿಂದ ಪ್ರತಿವಾದಿ 12 ಅಮೀರ್ ರವರಿಗೆ ಸಲ್ಲಿಸಿದಂತಹ ಸಮನ್ಸ್ ಜಾರಿಯಾಗಿರುತ್ತದೆ ಅವರು ಸಮನ್ಸ್ ಜಾರಿಯಾಗಿದ್ದರು ನ್ಯಾಯಾಲಯಕ್ಕೆ ಹಾಜರಾಗದೆ ಇದ್ದುದ್ದರಿಂದ ಅವರನ್ನು ನ್ಯಾಯಾಲಯವು ಏಕಪಕ್ಷೀಯ ಎಂದು ತೀರ್ಮಾನಿಸಿರುತ್ತದೆ ಅದರ ಉಪಯೋಗವನ್ನು ಪಡದುಕೊಂಡು ನಾನು ಅಸಲು ಪ್ರತಿವಾದಿ 12 ಅಮೀರ್ ಅಲ್ಲದೆ ಇದ್ದರೂ ಸಹ ಈಗ ಅಮೀರ್ ಎಂದು ನ್ಯಾಯಾಲಯಕ್ಕೆ ಹಾಜರಾಗಿರುತ್ತೇನೆ ಎಂದರೆ ಸಾಕ್ಷಿಯು ನಾನೇ ನಿಜವಾದ ಅಮೀರ್ ಪ್ರತಿವಾದಿ 12 ಎಂದು ನುಡಿಯುತ್ತಾರೆ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ ತಹಶೀಲ್ದಾರ್ ರವರು ನೀಡಿದ ಪತ್ರದಲ್ಲಿ ಅಮಿರ್ ರವರ ವಯಸ್ಸು 2001 ರಲ್ಲಿ 52 ಎಂದು ತೋರಿಸಲಾಗಿರುತ್ತದೆ ಇವತ್ತಿಗೆ ಅವರಿಗೆ ವಯಸ್ಸು 77 ವರ್ಷ ವಯಸ್ಸು ಆಗಿರುತ್ತದೆ ಎಂದರೆ ಸಾಕ್ಷಿಯು ಅದೇ ಅಮಿರ್ ನಾನು ಆಗಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಲಿಖಿತ ಹೇಳಿಕೆಯಲ್ಲಿ ನಾಗರಾಜು ರವರು ದಾವಾಸ್ತಿಯನ್ನು ಖರೀದಿಸಿರುವುದು ಸುಳ್ಳು ಮತ್ತು ಖಾತೆ ಬದಲಾವಣೆ ಮಾಡಲು ಅರ್ಜಿಯನ್ನು ಸಲ್ಲಿಸಿದರು ಎಂದು ಹೇಳಿ ಬರೆಸಿರುತ್ತೇನೆ ಎಂದರೆ ಸಾಕ್ಷಿಯು ಆ ರೀತಿ ಬರೆಸಿರುವುದಿಲ್ಲ ನನಗೆ ನಾಗರಾಜು ಯಾರು ಎಂದು ತಿಳಿದಿರುವುದೇ ಇಲ್ಲ ಎಂದು ನುಡಿಯುತ್ತಾರೆ.

4. ವಾದಿರವರು ನ್ಯಾಯಾಲಯಕ್ಕೆ ಯಾವುದೆಲ್ಲಾ ದಾಖಲಾತಿಗಳನ್ನು ಹಾಜರುಪಡಿಸಿರುತ್ತಾರೆ ಎಂದು ನಾನು ತಿಳಿದುಕೊಂಡಿರುವುದಿಲ್ಲ.

ಮುಂದುವರಿದ ಪಾಟೀ ಸವಾಲಿಗೆ ವಾದಿ ಪರ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ